# ಪ್ರೀತಿ ಪ್ರೇಮ ಡ್ರಾಮ

ಟಿ. ತಿಮ್ಮಪ್ಪ

## ಅಸ್ವಸ್ಥನಾದ ಹೇಮಾವತಿ ಅಪ್ಪ

ಅಣ್ಣನ ಮದುವೆ ಮುಗಿದು ಮೂರ್ನಾಲ್ಕು ವಾರಗಳಾಗಿರಬೇಕು. ದೊಡ್ಡಮ್ಮ ಮತ್ತು ದೊಡ್ಡಪ್ಪ ಮತ್ತೆ ನಮ್ಮ ಮನೆಗೆ ಬಂದರು. ಅವರ ಮುಖದಲ್ಲಿ ಸಂತೋಷ ಮಿನುಗುತಿತ್ತು. ಬಂದವರೇ ಅಪ್ಪನ ಮಂಚದ ಬದಿಯಲ್ಲಿ ಹಾಸಿದ್ದ ಚಾಪೆಯಲ್ಲಿ ಕುಳಿತರು. ಅಮ್ಮನನ್ನೂ ಕರೆದು ಕುಳ್ಳಿರಿಸಿಕೊಂಡು ದೊಡ್ಡಮ್ಮ ನಮ್ಮ ಹೇಮಾ ತುಂಬಾ ಅದೃಷ್ಟವಂತೆ.. ಎಂದು ಮಾತು ಶುರು ಮಾಡಿದರು. ನನಗೆ ನಾನು ಯಾವುದರಲ್ಲಿ ಅದೃಷ್ಟವಂತೆ ಎಂಬುದು ತಿಳಿಯದೇ ಒಳಗೊಳಗೆ ನಗು ಬಂದಿತು.

ಆವತ್ತು ಮದುವೆಯಲ್ಲಿ ಹೇಮಾಳನ್ನು ನಮ್ಮ ಸೊಸೆಯ ಸಂಬಂಧಿಕರೊಬ್ಬರ ಹುಡುಗ ನೋಡಿದನಂತೆ. ಅವರದ್ದು ಬೆಂಗಳೂರಿನಲ್ಲಿ ಭಾರೀ ಶ್ರೀಮಂತ ಕುಟುಂಬ. ಹುಡುಗನ ತಂದೆ ಇಲ್ಲ. ತಾಯಿ ಇದ್ದಾರೆ. ಅಣ್ಣನಿಗೆ ಮದುವೆಯಾಗಿದೆ. ತಮ್ಮ ಒಬ್ಬನಿದ್ದಾನೆ. ಅವರ ತಂದೆಯ ಆಸ್ತಿ ಆಗಲೇ ಮೂವರಿಗೂ ಪಾಲಾಗಿದೆಯಂತೆ. ಸದ್ಯಕ್ಕೆ ಹುಡುಗ ಅವರೊಂದಿಗೇ ಇದ್ದಾನೆ. ಮದುವೆಯಾದ ಮೇಲೆ ಅವನು ಹೆಂಡತಿಯೊಂದಿಗೆ ಇನ್ನೊಂದು ಮನೆಗೆ ಹೋಗಲು ಎಲ್ಲಾ ವ್ಯವಸ್ಥೆ ಮಾಡಿದ್ದಾರಂತೆ. ವರದಕ್ಷಿಣೆ, ವರೋಪಚಾರ ಏನೂ ಬೇಡ.. ನಾನು ಅದೇ ಹುಡುಗಿಯನ್ನು ಮದುವೆಯಾಗಬೇಕು ಎಂದು ನನ್ನ ಮಗ ಹಟ ಹಿಡಿದು ಕುಳಿತಿದ್ದಾನೆಂದು ಅವರ ತಾಯಿ ನಮ್ಮ ಬೀಗರ ಬಳಿಯಲ್ಲಿ ಹೇಳಿ ಕಳುಹಿಸಿದ್ದಾರೆ.

